ಎತ್ತಿರತಕ್ಕಂಥಾದ್ದು ಬಹಳ ರೆಲವೆಂಟ್ ಆಗಿರತಕ್ಕಂಥಾದ್ದು. ಈಗ 5-6 ದಿವಸದಲ್ಲಿ ಡೀಟೈಲ್ ಆಗಿ ಸಪ್ಲಿಮೆಂಟರಿ ಪ್ರಶ್ನೆಗೂ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಅದೂ ಒಪ್ಪಿತಕ್ಕಂಥಾದ್ದೇ. ಆದರೆ ಇನ್ನು ಒಂದಾಗಿದೆ. ಸರ್ಕಾರಕ್ಕೆ ಅಥವಾ ಮಾನ್ಯ ಮಂತ್ರಿಗಳಿಗೆ ಮಿನಿಮಂ 10 ದಿವಸ ಸಮಯ ಕೊಡಲಾಗುತ್ತದೆ. ಆದರೆ ಕೆಲವು ಕಡೆ ಮ್ಯಾಕ್ಸಿಮಂ ಟೈಂ ತೆಗೆದುಕೊಳ್ಳುವುದು ವಾಡಿಕೆಯಾಗಿದೆ. ಇಡೀ ಸೆಷನ್‌ನಲ್ಲಿ ಪ್ರಶ್ನೆಗೆ ಉತ್ತರ ಬಂದಿರುವುದಿಲ್ಲ. ಅದು ಏಕೆ ಎಂದು ನಮಗೆ ಗೊತ್ತಾಗಬೇಕಾಗುತ್ತದೆ.

ಅಧ್ಯಕ್ಷರು: ಸಮಗ್ರವಾದ ಆಲೋಚನೆ ಮಾಡಿದ್ದೀರಿ. ಅದನ್ನು ನಾವು ಸೆಟ್ಲೈಟ್ ಮಾಡೋಣ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಿಗೆ ಇನ್ ಟೈಂನಲ್ಲಿ ಪ್ರಶ್ನೆ ಹೋಗಲಿಲ್ಲ ಹಾಗಾಗಿ ಉತ್ತರ ಕೊಡಲಿಲ್ಲ ಎಂದು ಆದರೆ ಅವರಿಗೆ ಸಮಯ ಕೊಡುವುದು ಸೂಕ್ತ. ತಾವು ಅದನ್ನು ನಿರ್ಧರಿಸಿ ಮುಂದೆ ಸಮಯ ನಿಗದಿ ಮಾಡಿ. ಮತ್ತೆ ಈ ಪ್ರಶ್ನೆ ತೆಗೆದುಕೊಳ್ಳಬೇಕು ಎನ್ನುವುದು ನನ್ನ ಅಪೇಕ್ಷೆ. ಇದು ಇನ್ಯಾವುದೋ ಕಾರಣಕ್ಕೆ ಉತ್ತರ ಬರದೇ ಇರುವಂತಹ ರೀತಿಯಲ್ಲಿ ಆಗಬಾರದು. ಮುಂದಿನ ಅವಧಿಯಲ್ಲಾದರೂ ಸಹ ಪ್ರಶ್ನೆ ಬರುವ ರೀತಿಯಲ್ಲಿ ಅವಕಾಶವನ್ನು ದಯಮಾಡಿ ಕಲ್ಪಿಸಿಕೊಡಬೇಕು.

ಅಧ್ಯಕ್ಷರು: ಏರ್ಪಾಟು ಮಾಡೋಣ.

ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕು ಇಂಗಲಕೆರೆ ಆವರಣವನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಪರಿವರ್ತನೆ.

(275): 3008

ಶ್ರೀ ಹೆಚ್.ಸಿ.ಬಸವರಾಜ (ಪಿರಿಯಾಪಟ್ಟಣ): ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕು ಇಂಗಲಕೆರೆ ಆವರಣವನ್ನು ಪ್ರವಾಸೋದ್ಯಮ ಕೇಂದ್ರವಾಗಿ ಪರಿವರ್ತಿಸಲು ಅವಕಾಶವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿಲ್ಲದಿದ್ದರೆ ಪ್ರವಾಸಿಗರಿಗೆ ತಂಗುದಾಣ (ರೆಸ್ಟ್ ಹೌಸ್) ನಿರ್ಮಿಸಿ ದೋಣಿ ವಿಹಾರ ವ್ಯವಸ್ಥೆ ಮಾಡಿ ಪ್ರವಾಸಿಗರನ್ನು ಸೆಳೆಯಲು ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು):

ಅ) ಇಲ್ಲ

ಆ) ಪಿರಿಯಾಪಟ್ಟಣ ತಾಲ್ಲೂಕು ಇಂಗಲಕೆರೆಯನ್ನು ಪ್ರವಾಸಿ ತಾಣವೆಂದು ಗುರುತಿಸಿಲ್ಲ. ದೋಣಿ ವಿಹಾರ ನಡೆಸುವ ಹಾಗೂ ಗೆಸ್ಟ್ ಹೌಸ್ ನಿರ್ಮಿಸುವ ಯೋಜನೆ ಸದ್ಯ ಇಲಾಖೆ ಮುಂದೆ ಇರುವುದಿಲ್ಲ.

ಶ್ರೀ ಹೆಚ್.ಸಿ.ಬಸವರಾಜು: ಮಾನ್ಯ ಅಧ್ಯಕ್ಷರೆ, ನಾನು ಕೇಳಿದಂತಹ ಮೊದಲನೆಯ ಪ್ರಶ್ನೆಗೆ ಸರ್ಕಾರದವರು ಇಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಪ್ರವಾಸಿ ಕೇಂದ್ರವನ್ನಾಗಿ ಗುರುತಿಸಲು ಸರ್ಕಾರ ಏನು ಅಳತೆಗೋಲು ಇಟ್ಟುಕೊಂಡಿದೆ? ಏನೇನು Perquisites ಇರಬೇಕೆಂದು ಮಾನ್ಯ ಸಚಿವರು ತಿಳಸಬೇಕು. ಇನ್ನು ಎರಡನೆಯದಾಗಿ, ಈ ಸ್ಥಳವನ್ನು ಪರಿಶೀಲಿಸಿದ್ದಾರಾ? ಅಥವಾ ಅಧಿಕಾರಿಗಳನ್ನು ಕಳುಹಿಸಿ ಇಲ್ಲಿ ಪ್ರವಾಸಿ ಕೇಂದ್ರವನ್ನು ಮಾಡಲು ಅವಕಾಶ ಇದೆಯೇ ಎನ್ನುವ ಬಗ್ಗೆ ಏನಾದರೂ ಮಾಹಿತಿ ಸಂಗ್ರಹ ಮಾಡಿಕೊಂಡಿದ್ದಾರಾ? ಇದನ್ನು ಪ್ರವಾಸಿ ಕೇಂದ್ರವನ್ನಾಗಿ ಗುರುತಿಸಲು ಹಾಗೂ ಅಭಿವೃದ್ಧಿ ಪಡಿಸಲು ಸರ್ಕಾರ ಪರಿಶೀಲಿಸಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದೇ? ಏಕೆಂದರೆ ಇದು ಮೈಸೂರು-ಬಂಟ್ವಾಳ ರಸ್ತೆಯಲ್ಲಿ ಇರತಕ್ಕಂಥ ಹೆದ್ದಾರಿ. ಬೈಲುಕೊಪ್ಪದ ಟಿಬೇಟಿಯನ್ ಕಾಲೋನಿ ಪಕ್ಕದಲ್ಲಿ ಇರತಕ್ಕಂಥಾದ್ದು. ಸುಮಾರು 200 ಎಕರೆ ವಿಸ್ತೀರ್ಣದಲ್ಲಿ 365 ದಿವಸವೂ ನೀರಿದ್ದು ಅರಣ್ಯ ಇಲಾಖೆಯ ಕಾಡು ಪ್ರದೇಶವಿದ್ದು ಇಲ್ಲಿ ರೆಸ್ಟ್ ಹೌಸ್ ಕಟ್ಟಿಸಿ ದೋಣಿ ವಿಹಾರ ಮಾಡಿದರೆ, ಮುಖ್ಯ ರಸ್ತೆ ಇರುವುದರಿಂದ ಪ್ರವಾಸಿಗರನ್ನು ಆಕರ್ಷಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದರಿಂದ ಸರ್ಕಾರಕ್ಕೆ ಕೂಡ ಇನ್‌ಕಂ ಬರುವಂತಹ ಸಂದರ್ಭ ಇದೆ ಮತ್ತು ಪ್ರವಾಸಿಗರಿಗೆ ಅನುಕೂಲವಾಗುತ್ತದೆ. ಇದರ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಂಡು ಈ ಒಂದು ಯೋಜನೆಯನ್ನು ಅಳವಡಿಸಿ ಮಾಡಿಕೊಡುವುದಕ್ಕೆ ಸರ್ಕಾರಕ್ಕೆ ತೀರ್ಮಾನ ಮಾಡಬೇಕೆಂದು ಹೇಳುತ್ತಾ ಇದರ ಬಗ್ಗೆ ಮಾನ್ಯ ಸಚಿವರು ಏನು ಹೇಳುತ್ತಾರೆಂದು ಕೇಳುತ್ತೇನೆ.

ಶ್ರೀ ಆರ್.ರೋಷನ್ ಬೇಗ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಆ ಸ್ಥಳದಲ್ಲಿ ಬೋಟಿಂಗ್ ಫೆಸಿಲಿಟೀಸ್ ಕೇಳಿದ್ದಾರೆ. ಆದರೆ ನಮ್ಮ ವರದಿ ಪ್ರಕಾರ ಅಲ್ಲಿ ಬೇಸಿಗೆ ಬಂದರೆ ನೀರು ಇರುವುದಿಲ್ಲ, ಮಳೆಗಾಲದಲ್ಲಿ ಮಾತ್ರ ನೀರು ಇರುತ್ತದೆ ಎಂದು ಇದೆ. ಆದುದರಿಂದ ಬೋಟಿಂಗ್ ಫೆಸಿಲಿಟೀಸ್ ವರ್ಷ ಪೂರ್ತಿ ಮಾಡುವುದಕ್ಕೆ ಆಗುವುದಿಲ್ಲ. ಅದರ ಜೊತೆಗೆ ಅಲ್ಲಿ ರೆಸ್ಟ್ ಹೌಸ್ ಮಾಡಬೇಕೆಂದು ಹೇಳಿದ್ದಾರೆ. ಅಲ್ಲದೆ ಅಲ್ಲಿರತಕ್ಕಂಥ ಪಾಂಡ್‌ನಲ್ಲಿ ಬಹಳ ವೀಡ್ಸ್ ಇದ್ದು ಅದನ್ನೆಲ್ಲಾ ತೆಗೆಯಬೇಕಾಗುತ್ತದೆ. ರೆಸ್ಟ್ ಹೌಸ್ ವಿಚಾರವಾಗಿ ನಮ್ಮ ಡೈರೆಕ್ಟರ್ ಕಳುಹಿಸುತ್ತೇನೆ, ಹಾಗೂ ಅಧಿವೇಶನ ಮುಗಿದ ಮೇಲೆ ನಾನೇ ಒಂದು ಸಲ ಅವರ ಜೊತೆ ಹೋಗಿ ಇನ್ಸ್‌ಪೆಕ್ಟ್ ಮಾಡಿ ಅಲ್ಲಿ

ಸಾಧ್ಯವಾದರೆ ರೆಸ್ಟ್ ಹೌಸ್ ಕೊಡಬೇಕೆಂದರೆ ಮಾಡಿಸೋಣ.

ಶ್ರೀ ಹೆಚ್.ಸಿ.ಬಸವರಾಜ್: ಅಲ್ಲಿ ವೀಡ್ಸ್ ಬಹಳ ಇದೆ, ನೀರು ಎಲ್ಲಾ ಕಾಲದಲ್ಲೂ ಇರುವುದಿಲ್ಲವೆಂದು ಮಾನ್ಯ ಸಚಿವರು ಹೇಳಿದರು. ಅಲ್ಲಿ ನೀರು 365 ದಿವಸ ಪೆರಿನಿಯಲ್ ಸೋರ್ಸ್ ಇರತಕ್ಕಂಥ ಒಂದು ಕೆರೆ. ಆ ಕೆರೆ ಮೈನರ್ ಇರಿಗೇಷನ್‌ನಿಂದ ಡೆವಲಪ್ ಆಗಿರತಕ್ಕಂಥ ಕೆರೆ. ನೂರಾರು ಎಕರೆಗೆ ನೀರು ಕೊಡುತ್ತದೆ. ಪ್ರವಾಸಿ ಕೇಂದ್ರವನ್ನಾಗಿ ಮಾಡುವುದಕ್ಕೆ ಆ ಸ್ಥಳವು ಬಹಳ ಯೋಗ್ಯವಾಗಿದೆ. ಸರ್ಕಾರ ಇದನ್ನು ಪರಿಶೀಲಿಸಿ ನೋಡಿ ಮಾಡುವುದಾದರೆ ಬಹಳ ಸಂತೋಷ. ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡು ಅದನ್ನ ಪ್ರವಾಸೋದ್ಯಮ ಕೇಂದ್ರವನ್ನಾಗಿ ಕೊಡಬೇಕು ಹಾಗೂ ಎಷ್ಟು ದಿವಸದಲ್ಲಿ ಬಂದು ನೋಡಿ ಈ ಕೆಲಸವನ್ನು ಹಮ್ಮಿಕೊಳ್ಳುತ್ತೀರೆಂದು ಕೇಳುತ್ತೇನೆ.

ಶ್ರೀ ಆರ್.ರೋಷನ್‌ಬೇಗ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಅಲ್ಲಿ 365 ದಿವಸ ನೀರಿರುತ್ತದೆ, ಆದರಿಂದ ಬೋಟಿಂಗ್ ಫೆಸಿಲಿಟೀಸ್ ಮಾಡಬಹುದೆಂದು ಹೇಳಿದ್ದಾರೆ. ಸರ್ಕಾರದ ವತಿಯಿಂದ ಟೂರಿಸಂ ಡಿಪಾರ್ಟ್‌ಮೆಂಟ್‌ನಿಂದ ಮೈನರ್ ಇರಿಗೇಷನ್ ಇಲಾಖೆಯವರ ಜೊತೆ ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಒಳ್ಳೆ ಕೆರೆ ಇದೆ For the benefit of middle class. ಅಲ್ಲೆಲ್ಲಾ ಬೋಟಿಂಗ್ ಫೆಸಿಲಿಟೀಸ್ ಮಾಡಬೇಕೆಂದು ಒಂದು ಸ್ಕೀಂ ಮಾಡಿಕೊಂಡಿದ್ದೇವೆ. ಈ ಅಧಿವೇಶನವಾದ ಮೇಲೆ ನಾನೇ ಸ್ವತಃ ಮಾನ್ಯ ಸದಸ್ಯರ ಜೊತೆ ಅಲ್ಲಿಗೆ ಹೋಗಿ ಇನ್ಸ್‌ಪೆಕ್ಟ್ ಮಾಡಿ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಅದನ್ನು ಹಾಕಿಕೊಳ್ಳುತ್ತೇನೆ ಎನ್ನುವ ಆಶ್ವಾಸನೆಯನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ನೀಡುತ್ತೇನೆ.

11.40 ಎ.ಎಂ

ಅಧ್ಯಕ್ಷರು: ಶ್ರೀ ಸುರೇಶ್ ಕುಮಾರ್ ಅವರ 3007ನೇ ಪ್ರಶ್ನೆಯನ್ನು ಕಾನೂನು ಇಲಾಖೆಗೆ ವರ್ಗಾಯಿಸಿದ್ದಾರೆ. ಈ ಪ್ರಶ್ನೆಯನ್ನು ಮುಂದಿನ ಸೋಮವಾರ ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಎಸ್.ಸುರೇಶ್ ಕುಮಾರ್: ಆಯಿತು. ದಯಮಾಡಿ ಮುಂದಿನ ಸೋಮವಾರ ಸರ್ಕಾರದಿಂದ ಉತ್ತರವನ್ನು ಕೊಡಿಸಿಕೊಡಬೇಕು.

ಸಕಲೇಶಪುರ ಹಾಗೂ ಆಲೂರು ತಾಲ್ಲೂಕಿನಲ್ಲಿರುವ ಕೆಟ್ಟ ರಸ್ತೆಗಳ ಸುಧಾರಣೆ

(279) 2690